# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 329(416)

ಮಾನ್ಯ ಸದಸ್ಯರ ಹೆಸರು : ಡಾ. ವೈ.ಎ ನಾರಾಯಣಸ್ವಾಮಿ

(ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ: : 23.09.2020

ಉತ್ತರಿಸುವ ಮಾನ್ಯ ಸಚಿವರು : ಮಾನ್ಯ ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಆಹಾರ ಪಾರ್ಕುಗಳ ಸಂಖ್ಯೆ ಎಷ್ಟು; ಅವು ಯಾವುವು; (ವಿವರಗಳನ್ನು ನೀಡುವುದು) | ರಾಜ್ಯದಲ್ಲಿರುವ ಆಹಾರ ಪಾರ್ಕುಗಳ ಸಂಖ್ಯೆ: ಆರು(6);<br>➢ **ಕೇಂದ್ರ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ಆಹಾರ ಪಾರ್ಕುಗಳು-2**<br>1. ಮೆ.ಇಂಡಿಯಾ ಮೆಗಾ ಫುಡ್ ಪಾರ್ಕ್, ತುಮಕೂರು<br>2. ಮೆ.ಫೆವೋರಿಚ್ ಮೆಗಾ ಫುಡ್ ಪಾರ್ಕ್, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ<br>➢ **ಕೇಂದ್ರಸರ್ಕಾರ, ರಾಜ್ಯಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ಆಹಾರ ಪಾರ್ಕುಗಳು -4**<br>1. ಮೆ.ಇನ್ನೋವ ಅಗ್ರಿ ಬಯೋಪಾರ್ಕ್, ಮಾಲೂರು, ಕೋಲಾರ ಜಿಲ್ಲೆ<br>2. ಮೆ.ಗ್ರೀನ್ ಫುಡ್ ಪಾರ್ಕ್, ನವನಗರ, ಬಾಗಲಕೋಟೆ<br>3. ಮೆ.ಅಕ್ಷಯ ಫುಡ್ ಪಾರ್ಕ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ<br>4. ಮೆ.ಜೇವರ್ಗಿಅಗ್ರೋ ಫುಡ್ ಪಾರ್ಕ್, ಜೇವರ್ಗಿ, ಕಲಬುರ್ಗಿ ಜಿಲ್ಲೆ |
| ಆ) | ಆಹಾರ ಪಾರ್ಕ್ ಸ್ಥಾಪನೆಯ ಉದ್ದೇಶ ಏನು; ಆಹಾರ ಪಾರ್ಕ್‌ಗಳಲ್ಲಿ ನಿಗದಿತ ಉದ್ದೇಶ ಈಡೇರಿಸಲು ವಿಳಂಬವಾಗಿರುವುದಕ್ಕೆ ಕಾರಣವೇನು; | ರಾಜ್ಯದ ಗ್ರಾಮೀಣ ಭಾಗದಲ್ಲಿ ರೈತರ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಆಹಾರ ಸಂಸ್ಕರಣ ಉದ್ದಿಮೆಗಳ ಸ್ಥಾಪನೆಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ (PPP Model) ಸ್ಥಾಪಿಸಿ, ಉದ್ಯೋಗ ಸೃಷ್ಟಿಸುವುದರ ಜೊತೆಗೆ ರೈತರ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಕಟಾವು ನಂತರದ ನಷ್ಟವನ್ನು ತಗ್ಗಿಸಿ, ರೈತರ ಆದಾಯವನ್ನು ವೃದ್ಧಿಸುವುದು ಸದರಿ ಆಹಾರ ಪಾರ್ಕುಗಳ ಉದ್ದೇಶ/ವೈಶಿಷ್ಟತೆಯಾಗಿದೆ.<br>ಸದರಿ ಆಹಾರ ಪಾರ್ಕುಗಳ ಉಪಯುಕ್ತತೆಯಿಂದ ಆಹಾರ ಸಂಸ್ಕರಣ ಉದ್ದಿಮೆಗಳ ಸ್ಥಾಪನೆಗೆ ಅವಶ್ಯಕವಿರುವ ಮೂಲಭೂತ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಸೌಕರ್ಯಗಳಾದ ಶೀತಲೀಕರಣಘಟಕ, ಪ್ರೀಕೂಲಿಂಗ್ ಘಟಕ, ಧಾನ್ಯ, ಹಣ್ಣು ಮತ್ತು ತರಕಾರಿಗಳನ್ನು ಶ್ರೇಣೀಕರಿಸುವ ಮತ್ತು ಪ್ಯಾಕೇಜಿಂಗ್ ಯಂತ್ರೋಪಕರಣಗಳು, ಪ್ಯಾಕ್‌ಹೌಸ್, ಸಂಗ್ರಹಣಾ ಗೋದಾಮು, ವಿದ್ಯುದ್ದೀಕರಣ, ಪ್ರಯೋಗಾಲಯ, ಒಳಚರಂಡಿವ್ಯವಸ್ಥೆ, ವೇಬ್ರಿಡ್ಜ್ ಸ್ಥಾಪನೆ, ETP, ಕೇಂದ್ರೀಕೃತ ಆಡಳಿತ ಕಛೇರಿ ನಿರ್ಮಾಣ ಹಾಗೂ ಪಾರ್ಕಿನಲ್ಲಿ ರಸ್ತೆಗಳ ನಿರ್ಮಾಣವನ್ನು ಆಹಾರಪಾರ್ಕಿನ ಪ್ರವರ್ತಕರು ಕೈಗೊಂಡು ಆಹಾರಪಾರ್ಕಿನಲ್ಲಿ ಅತಿಸಣ್ಣ, ಸಣ್ಣ & ಮಧ್ಯಮ (MSME) ವರ್ಗದ ಆಹಾರ ಸಂಸ್ಕರಣ ಘಟಕಗಳ ಸ್ಥಾಪನೆಗೆ ಮುಂದಾಗುವ ಎಲ್ಲಾಉದ್ದಿಮೆದಾರರಿಗೆ ಈ ಮೂಲಭೂತ ಸೌಕರ್ಯಗಳನ್ನು ಬಳಸಲು ಅವಕಾಶ ಕಲ್ಪಿಸಿದಂತಾಗುತ್ತದೆ.<br><br>**ಒಟ್ಟಾರೆ ರಾಜ್ಯದ ಎಲ್ಲಾ ಆಹಾರ ಪಾರ್ಕುಗಳಿಂದ 7576 ಉದ್ಯೋಗ ಸೃಷ್ಟಿಯಾಗಿರುತ್ತದೆ.**<br><br>ಆಹಾರ ಪಾರ್ಕುಗಳ ಸ್ಥಾಪನೆಯಿಂದ ಉದ್ದಿಮೆದಾರರಿಗೆ ಆಹಾರ ಸಂಸ್ಕರಣ ಘಟಕಗಳನ್ನು ನಿರ್ವಹಿಸಲು ಬೇಕಾಗುವ ಇತರೆ ಅವಶ್ಯ ಕಚ್ಚಾವಸ್ತುಗಳನ್ನು ಪೂರೈಸುವ ಪೂರಕ ಘಟಕಗಳು (Ancillary units) ಸ್ಥಾಪನೆಗೊಂಡು ಆ ಭಾಗದಲ್ಲಿ ಆರ್ಥಿಕ ಮಟ್ಟದಲ್ಲಿ ಸುಧಾರಣೆಯಾಗುವುದರ ಜೊತೆಗೆ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಯಾಗುವುದು.<br><br>ಆಹಾರ ಪಾರ್ಕುಗಳ ಪ್ರವರ್ತಕರುಗಳ ದೂರದೃಷ್ಟಿ ಕೊರತೆ, ಹಣಕಾಸು ಮುಗ್ಗಟ್ಟು, ಕೆಲವು ಮೂಲಭೂತ ಸೌಕರ್ಯಗಳಾದ, ನೀರು, ರಸ್ತೆ, ವಿದ್ಯುತ್ ಮತ್ತು ಸಾಲ ಸೌಲಭ್ಯಗಳ ಕೊರತೆ ಮುಂತಾದ ಕಾರಣಗಳಿಂದ, ಸ್ಥಳೀಯವಾಗಿ ಆಹಾರ ಸಂಸ್ಕರಣೆ ಉದ್ದಿಮೆದಾರರು ಸಂಸ್ಕರಣ ಘಟಕ ಸ್ಥಾಪಿಸಲು ಹಿಂದೇಟು ಹಾಕುತ್ತಿರುವುದರಿಂದಾಗಿ ನಿಗದಿತ ಉದ್ದೇಶ ಈಡೇರಿಸಲು ವಿಳಂಬವಾಗಿರುತ್ತದೆ. |
| ಇ) | ವಿವಿಧ ಇಲಾಖೆಗಳ ಮಧ್ಯೆ ಸಮನ್ವಯ ಕೊರತೆಯಿಂದ ಈ ಪಾರ್ಕ್‌ಗಳ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿವಿಧ ಇಲಾಖೆಗಳ ಮಧ್ಯೆ ಸಮನ್ವಯ ಕೊರತೆಯಿಂದ ಈ ಪಾರ್ಕ್‌ಗಳ ಅಭಿವೃದ್ಧಿ ಕುಂಠಿತವಾಗಿರುವುದಿಲ್ಲ. ಆದಾಗ್ಯೂ ಕೆಲವು ಆಹಾರ ಪಾರ್ಕುಗಳು ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಈ) | ಬಂದಿದ್ದಲ್ಲಿ, ಇದನ್ನು ಬಗೆಹರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ರಾಜ್ಯದಲ್ಲಿ ಆಹಾರ ಸಂಸ್ಕರಣೆ ವಲಯಗಳನ್ನು ಬಲಪಡಿಸಲು ಹಾಗೂ ಸಂಬಂಧಿಸಿದ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಮತ್ತು ಸರ್ಕಾರದ ಉನ್ನತ ಮಟ್ಟದಲ್ಲಿ |